

ಥ್ರಿಲ್ಲರ್ ಜಾನರ್‌ನಲ್ಲಿಯೇ ರೂಪುಗೊಂಡೂ ಹಲವು ಸೂಕ್ಷ್ಮ ವಿಷಯಗಳನ್ನು ಹೇಳುವ ಕಿರುಚಿತ್ರ ಇದು.

■ ಗೌರಿ

# ಥ್ರಿಲ್ಲರ್ ಹಳಿಯ ಮೇಲೆ ಸಂಸಾರಕಥನ

ಹೆಸರು: ಮುನ್‌ಕೀ (ಇಂಗ್ಲಿಷ್)
ನಿರ್ದೇಶನ: ಸ್ಟೀವನ್ ಚೋವ್
ನಿರ್ಮಾಣ: ತಿರಾಚೆಲ್ ಪಾವ್‌ಚೆಟ್
ಛಾಯಾಗ್ರಹಣ: ಆ್ಯಡಂ ಲಕ್‌ಸ್ಟೋನ್
ಸಂಗೀತ: ಕಾರ್ಲ್ ಸ್ಟೀವನ್
ತಾರಾಗಣ: ಕ್ಲಾನಾ ತಾಂಗ್, ಪಾಕ್ ವಿಂಗ್ ಲೇಯುಂಗ್, ಜಾನೆಟ್ ಟಾನ್

ಮಕ್ಕಳು ಮತ್ತು ಪೋಷಕರ ನಡುವಿನ ಸಂಬಂಧ ಬಹುಸೂಕ್ಷ್ಮವಾದದ್ದು. ಅದು ಒಂದು ರೀತಿಯಲ್ಲಿ ಕತ್ತಿಯ ಮೇಲಿನ ನಡಿಗೆಯೂ ಹೌದು. ಗೌರವ, ಪ್ರೀತಿ, ಅಕ್ಕರೆ ಎಲ್ಲವುಗಳಿಂದ ಬಲಗೊಳ್ಳಬೇಕಾದ ಸಂಬಂಧ ಕಣ್ಮುಚ್ಚಿ ತೆರೆಯುವಷ್ಟರಲ್ಲಿ ದ್ವೇಷ, ತಿರಸ್ಕಾರಗಳಿಂದ ಛಿದ್ರಗೊಳ್ಳುವ ಸಾಧ್ಯತೆಯೂ ನೆರಳಿನ ಹಾಗೆಯೇ ಜೊತೆಗಿರುತ್ತದೆ. ಹರೆಯದ ಆವೇಶದಲ್ಲಿ ಮಕ್ಕಳು ಅಪ್ಪ, ಅಮ್ಮನ ಮೇಲೆ ಸಿಟ್ಟಿಗೆದ್ದು ಮಾಡುವ ಸಣ್ಣ ತಪ್ಪುಗಳು ದೊಡ್ಡ ಅನಾಹುತಕ್ಕೆ ಎಡೆಮಾಡಿಕೊಟ್ಟಿರುವ ಸಾಕಷ್ಟು ಉದಾಹರಣೆಗಳು ನಮ್ಮಲ್ಲಿವೆ. ಇಂಥದ್ದೇ ಒಂದು ನೈಜ ಉದಾಹರಣೆಯನ್ನಿಟ್ಟುಕೊಂಡು ಗಟ್ಟಿಮುಟ್ಟಾದ ಒಂದು ಥ್ರಿಲ್ಲರ್ ಕಿರುಚಿತ್ರವನ್ನು ಹೆಣೆದಿದ್ದಾರೆ ನ್ಯೂಜಿಲೆಂಡ್‌ನ ನಿರ್ದೇಶಕ ಸ್ಟೀವನ್ ಚೋವ್. ಈ ಕಿರುಚಿತ್ರದ ಹೆಸರು ಮುನ್‌ಕೀ.

ಮಗಳು ಸ್ನೇಹಿತನ ಜೊತೆಗೆ ಇರುವುದನ್ನು ನೋಡಿದ ತಂದೆ ಅವಳನ್ನು ಕರೆತಂದು ಮನೆಯಲ್ಲಿ ಕೂಡಿ ಹಾಕುತ್ತಾನೆ. ಜೊತೆಗೆ ಹೊಡೆದು ಬಡಿದು ಹಿಂಸಿಸುತ್ತಾನೆ. ಅಮ್ಮನೂ, 'ಅಪ್ಪನ ಮಾತು ಕೇಳು, ಅವನನ್ನು ಬಿಟ್ಟು ಬಿಡು' ಎಂದೇ ಬುದ್ಧಿವಾದ ಹೇಳುತ್ತಾಳೆ. ಹತಾಶಳಾದ ಮಗಳ ಮನಸ್ಸಿನಲ್ಲಿ ಅಪ್ಪ, ಅಮ್ಮನ ಕುರಿತು ತಿರಸ್ಕಾರ ಬೆಳೆಯುತ್ತದೆ. ಅದು ಪ್ರತೀಕಾರ ತೀರಿಸಿಕೊಳ್ಳುವ ಮಟ್ಟಕ್ಕೂ ಹೋಗುತ್ತದೆ. ಸ್ನೇಹಿತನಿಗೆ, ಮನೆಯನ್ನು ದರೋಡೆ ಮಾಡುವ ಹಾಗೆ ನಾಟಕ ಮಾಡಿ ತನ್ನನ್ನು ಬಿಡಿಸಿಕೊಂಡು ಹೋಗುವಂತೆ ಕೇಳುತ್ತಾಳೆ. ಅವನು ಸ್ನೇಹಿತರೊಟ್ಟಿಗೆ ಮುಸುಕುಧಾರಿಯಾಗಿ ಬಂದಾಗ ಬಾಗಿಲ ಬೋಲ್ಟ್ ತೆಗೆದುಕೊಟ್ಟು ಸಹಕರಿಸುತ್ತಾಳೆ. ಆದರೆ ಯಾವಾಗ ಅವರು ಗನ್ ಹಿಡಿದು ಮನೆಯೊಳಗೆ ಬರುತ್ತಾರೋ ಆಗ ಪರಿಸ್ಥಿತಿ ಅವಳ ಕೈ ಮೀರುತ್ತದೆ. ಕೊನೆಯಲ್ಲಿ ಆವೇಶದಲ್ಲಿ ಅವಳ ಸ್ನೇಹಿತ ಅಪ್ಪ ಅಮ್ಮನಿಗೆ ಗುಂಡು ಹಾರಿಸಿ ಹೋಗಿಬಿಡುತ್ತಾನೆ.

ಒಂದು ಘಟನೆಯನ್ನು ಸಿನಿಮಾ ಮಾಧ್ಯಮಕ್ಕೆ ಹೇಗೆ ಒಗ್ಗಿಸಬೇಕು ಮತ್ತು ಅದು ಹೇಗೆ ರೋಚಕವಾಗಿ ನೋಡಿಸಿಕೊಂಡು ಹೋಗುವ ಹಾಗೆ ಮಾಡಬೇಕು ಎಂಬುದು ನಿರ್ದೇಶಕರಿಗೆ ಚೆನ್ನಾಗಿಯೇ ಗೊತ್ತಿದೆ. ತುಂಬ ಶಕ್ತಿಶಾಲಿಯಾದ ಹಿನ್ನೆಲೆ ಸಂಗೀತವೂ ಕಥೆಯನ್ನು ಇನ್ನಷ್ಟು ರೋಮಾಂಚಕಾರಿಯಾಗಿಸಿದೆ. ಆದರೆ ಇದನ್ನು ಬರೀ ರೋಮಾಂಚನ ಉಂಟುಮಾಡುವ ಕಥೆಯನ್ನಷ್ಟೇ ಆಗಿಸದೆ, ಮಕ್ಕಳು–ಪೋಷಕರ ನಡುವಿನ ಸಂಬಂಧ ಸೂಕ್ಷ್ಮತೆ, ದ್ವೇಷ, ತಿರಸ್ಕಾರಗಳು ನಮ್ಮನ್ನೇ ನುಂಗುವ ವಿಪರ್ಯಾಸ, ಕ್ರೌರ್ಯದ ಅಡಿಯಾಳಾದವರ ವಿಧ್ವಂಸಕತೆ ಎಲ್ಲವನ್ನೂ ಕಾಣಿಸುವ ಕಿರುಚಿತ್ರವಾಗಿಸುವಲ್ಲಿ ನಿರ್ದೇಶಕರ ಕಾಣ್ಕೆ ಇದೆ. ಹಾಗಾಗಿಯೇ ಇದು ನೆನಪಿಟ್ಟುಕೊಳ್ಳಬೇಕಾದ ಕಿರುಚಿತ್ರವಾಗುತ್ತದೆ. ಅಲ್ಲಿನ ಭಯ, ಆತಂಕ, ವಿಷಾದ ಎಲ್ಲವೂ ಮನಸ್ಸಿಗೆ ತಾಕುತ್ತದೆ; ಮನಸ್ಸನ್ನು ಕದಡುತ್ತದೆ. ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿರುವ ಕ್ಲಾನಾ ತಾಂಗ್ ಅವರ ನಟನೆಯೂ ಈ ಚಿತ್ರಕ್ಕೊಂದು ಭಾವಭೂಮಿಕೆಯನ್ನು ನಿರ್ಮಿಸಿದೆ.

ಕಿರುಚಿತ್ರದ ಚೌಕಟ್ಟು ಎಷ್ಟು ದೊಡ್ಡದು ಎಂಬುದು ನಿರ್ದೇಶಕರಿಗೆ ಗೊತ್ತಿದೆ. ಹಾಗಾಗಿಯೇ ಅದರ ಒಳಗಡೆಯೇ ಕಥೆಯ ಹರಿವು, ಭಾವನೆಗಳು ಏರಿಳಿತ, ಥ್ರಿಲ್ಲರ್ ಅಂಶಗಳ ಜಗಿತ ಎಲ್ಲವನ್ನೂ ಸಾಧಿಸಲು ಅವರಿಗೆ ಸಾಧ್ಯವಾಗಿದೆ. ಈ ಚಿತ್ರವು ಉಂಟುಮಾಡುವ ಒಟ್ಟಾರೆ ಪರಿಣಾಮದಲ್ಲಿ ತಾಂತ್ರಿಕ ತಂಡದ ಕೊಡುಗೆಯೂ ಅಷ್ಟೇ ಹಿರಿದಾಗಿದೆ.

ಕಿರುಚಿತ್ರ ವೀಕ್ಷಣೆಗೆ https://bit.ly/3uvHeWQ ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.